ಮುಜುಗರಕ್ಕೆ ಒಡ್ಡುವ ಸಾಧ್ಯತೆ ಇದ್ದುದರಿಂದ ಮೂರನೇ ಬಾರಿ ಎಂಎಲ್ಎ ಆದರೂ ಮಂತ್ರಿ ಮಂಡಲದಲ್ಲಿ ಸ್ಥಾನ ಸಿಕ್ಕಿರಲಿಲ್ಲ. ಜಿಲ್ಲೆಯ ಎಂಪಿ ಸಹ, ಎಂಎಲ್ಎ ಸಿದ್ದಪ್ಪ ಹಾಕಿದ ಗೆರೆ ದಾಟುತ್ತಿರಲಿಲ್ಲ. ಸಿದ್ದಪ್ಪನ ಹಿನ್ನೆಲೆಯೇ ಹಾಗಿತ್ತು.

ಅಂಥಾ ಸಿದ್ದಪ್ಪನಿಗೆ ಒಂದೆರಡು ಇರುಸು ಮುರುಸಾಗುವ ಕೆಲಸಗಳನ್ನು ಮಾಡಿ ಅವರ ಕೆಂಗಣ್ಣಿಗೆ ಗುರಿಯಾಗಿದ್ದ ಮಾಯಣ್ಣ. ಮೊದಲನೆಯದಾಗಿ, ಸ್ಟೇಷನ್ನಿಗೆ ರಿಪೋರ್ಟ್ ಮಾಡಿಕೊಂಡ ನಂತರ ಕ್ಷೇತ್ರದ ಧುರೀಣರನ್ನು ಖುದ್ದಾಗಿ ಕಂಡು ಅವರ ಸಹಕಾರ, ಆಶೀರ್ವಾದಗಳನ್ನು ಪಡೆಯುವುದು ಚಾಲ್ತಿಯಲ್ಲಿರುವ ಪರಿಪಾಟ. ಎರಡನೆಯದಾಗಿ, ಸಿದ್ದಪ್ಪ ತನ್ನ ಪರಮಾಪ್ತ ಶಿಷ್ಯನ ಮೂಲಕ ರಾಜಕೀಯ ವಿರೋಧಿಯೊಬ್ಬನ ಹಳೇ ಪೊಲೀಸು ಕಡತಗಳನ್ನು ತೆಗೆದಿರಿಸಲು ಹೇಳಿ ಕಳಿಸಿದ್ದ. ಮಾಯಣ್ಣ ಎರಡಕ್ಕೂ ಸೊಪ್ಪು ಹಾಕಿರಲಿಲ್ಲ. ಅಷ್ಟೇ ಅಲ್ಲದೆ ಸಿದ್ದಪ್ಪನ ಆ ಖಾಸಾ ಶಿಷ್ಯನನ್ನೇ ಒಂದು ಹಳೆ ಕೇಸಿನ ಸಂಬಂಧ ಒಳಗೆ ಕೂರಿಸಿದ್ದ. ಮಾಯಣ್ಣನ ಈ ಧಾರ್ಷ್ಟ್ಯ ಸಿದ್ದಪ್ಪನನ್ನು ವ್ಯಗ್ರಗೊಳಿಸಿ ಅಂದು ಸ್ಟೇಷನ್ನಿಗೆ ಕರೆತಂದಿತ್ತು. ಅಷ್ಟೇ ಅಲ್ಲದೆ, ತನ್ನ ಹಿಂಬಾಲಕರಿಗೆ ಇಲ್ಲಿ ಬಾಸ್ ಯಾರು ಎಂದು ಸ್ಪಷ್ಟವಾಗಿ ಸಾಬೀತು ಮಾಡಬೇಕಿತ್ತು. ಅದೇ ತರಾತುರಿಯಲ್ಲಿ ಬಿರಬಿರನೆ ಎಸ್ಪಿ ಇದ್ದ ಕೋಣೆಗೆ ತನ್ನ ಚಮಚ–ಚೇಲಾಗಳ ದಂಡಿನ ಸಮೇತ ನುಗ್ಗಿದ ಸಿದ್ದಪ್ಪ ಏರಿದ ಗಂಟಲಲ್ಲಿ, 'ಯಾರ್ರೀ ಅವನು ಹೊಸ ಎಸ್ಐ... ಕರುಸ್ರೀ... ರೀತಿ–ನೀತಿ ಏನೂ ತಿಳಿದೇನು ಅವನ್ಗೆ... ರಿಪೋರ್ಟ್ ಮಾಡ್ಕೊಂಡ್ಮೇಲೆ ನಮ್ಮನ್ನೇನಾದ್ರು ಬಂದು ನೋಡುದ್ನ... ನೀವು ಸೀನಿಯರ್ ಐಪಿಎಸ್ ಆಫೀಸರ್ ಅನ್ನೋದು ಏನ್ಕಾಯ್ತು... ಯೇಳದಲ್ವೇನ್ರಿ... ಓಗ್ಲಿ ಅದ್ಯಾವ್ದೊ ಹಳೆ ರಿಕಾರ್ಡ್ ತೋರ್ಸು ಅಂದೆ... ಕಿವಿ ಮೇಲೇ ಹಾಕ್ಕೊಂಡ್ಲಿಲ್ಲ... ಇದೇ ಏನ್ರೀ ಒಬ್ಬ ಜನಪ್ರತಿನಿಧಿಗೆ ಕೊಡೊ ರೆಸ್ಪೆಕ್ಟೂ...?'

ಏಕಾಏಕಿ ಏರಿ ಬಂದ ಸಿದ್ದಪ್ಪನ ರಭಸಕ್ಕೆ ಐಪಿಎಸ್ ಆಫೀಸರ್ ಅದುರಿ ಹೋಗಿದ್ದ.

'ನಾನು ಹೇಳ್ತೀನಿ ಬಿಡಿ ಸಾರ್ ಅವ್ರಿಗೆ... ಸಮಾಧಾನ ಮಾಡ್ಕೊಳಿ... ನಿಮಗೆ ಬೇಕಾಗಿರೊ ಮಾಹಿತಿ ನಿಮಗೆ ಸಿಗುತ್ತೆ... ಎಸ್.ಐ. ಇನ್ನೇನು ಬಂದುಬಿಡ್ತಾರೆ...'

'ಅಷ್ಟೇ ಅಲ್ಲ ಕಣ್ರೀ... ನಮ್ಮುಡ್ಗನ್ನ ಇಲ್ಲಿ ಲಾಕ್ ಮಾಡಿ ಕುಂಡ್ರುಸವ್ನೆ... ನಮ್ಕಡೆ ಉಡ್ಗ ಅಂತ ಯೇಳುದ್ಮೇಲೂನೂ, ಅದೂ ಯಾವ್ದೋ ಹಳೆ ಪೆಟ್ಟಿ ಕೇಸ್ ಮೇಲೆ... ಅಂಗಾದ್ರೆ ನಾವೇನ್ಕು ಲೆಕ್ಕುಕ್ಕೆ ಇಲ್ವಾ ಯೆಂಗೆ...'

ಎಲ್ಲಾ ಕಳ್ಳರೇ ಇರುವ ಗಾಜಿನ ಮನೆಯಲ್ಲಿ ಯಾರೂ ಯಾರ ಮೇಲೂ ಕಲ್ಲು ತೂರುವ ಹಾಗಿಲ್ಲ ಎನ್ನುವುದು ಅಘೋಷಿತ ತತ್ವ. ಬೆನ್ನುಮೂಳೆ ಬಿಗಿ ಇಲ್ಲದ ಎಸ್ಪಿ, ಕುದಿಯುತ್ತಿದ್ದ ಎಂಎಲ್ಎ ಸಿದ್ದಪ್ಪನನ್ನು ಸಮಾಧಾನಿಸಲು ಹರಸಾಹಸಪಡುತ್ತಿದ್ದ.

'ನೀವೇನೂ ವರೀ ಮಾಡ್ಬೇಡಿ ಸಾರ್... ನಾನೇ ಖುದ್ದಾಗಿ ಎಲ್ಲಾ ನೋಡ್ತೀನಿ'.

ಅಷ್ಟೊತ್ತಿಗೆ ಸರಿಯಾಗಿ ಬಂದ ಮಾಯಣ್ಣ ಇನ್ನೂ ನಿಂತೇ ಇದ್ದ ಎಸ್ಪಿ ಎದುರು ನಿಂತು ಸೆಲ್ಯೂಟ್ ಹೊಡೆದು, ಕುರ್ಚಿಯಲ್ಲಿ ಕುಳಿತ ಸಿದ್ದಪ್ಪನಿಗೂ ಕೂಡ ವಂದಿಸಿದ.

ಎಸ್ಪಿ ತಮ್ಮ ಅಸಹನೆಯನ್ನು ಅದುಮಿಡುತ್ತಲೇ–

'ಮಾಯಣ್ಣ, ಏನ್ರೀ ಇದೆಲ್ಲಾ... ಒಬ್ಬ ಎಂಎಲ್ಎ ಸ್ಟೇಷನ್ ತನಕ ಬರಬೇಕೇನ್ರೀ... ಐ ವಾಂಟ್ ಯೂ ಟು ಸೆಟ್ ರೈಟ್ ಆಲ್ ದಿ ಇಷ್ಯೂಸ್ ಅಟ್ ಒನ್ಸ್... ನೋ ಇಫ್ಸ್ ಅಂಡ್ ಬಟ್ಸ್'.

'ಯೆಸ್ ಸಾರ್'.

ಮಾಯಣ್ಣ ಸಿದ್ದಪ್ಪನ ಕಡೆ ತಿರುಗಿ,

'ಬನ್ನಿ ಸಾರ್, ರೆಕಾರ್ಡ್ ರೂಮ್‌ಗೆ... ನೀವು ಕೇಳಿರೊ ಎಲ್ಲಾ ರೆಕಾರ್ಡ್ ಎತ್ತಿಟ್ಟಿದ್ದೀನಿ, ನೀವೇ ನೋಡಬಹುದು'.

ಸಿದ್ದಪ್ಪ ಮುಂದೆ ತನಗೇ ಎರವಾಗಬಹುದಾದ, ತನ್ನ ಕ್ಷೇತ್ರದವನೇ ಆದ ಒಬ್ಬ ಎಳಸು ರಾಜಕೀಯ ವಿರೋಧಿಯ ಹಳೆ ಪುರಾಣ ಕೆದಕಿ, ಚಿಗುರಿನಲ್ಲೇ ಚಿವುಟಿ, ಹದಮಾಡಿ ಹಣಿಯಬೇಕಿತ್ತು.

'ರೀ ಕುಮಾರ್, ಆ ಪಿ.ಸಿ. ವಿನಯ್‌ನ ರೆಕಾರ್ಡ್ ರೂಮ್‌ಗೆ ಕಳುಸ್ರಿ... ನೀವ್ ಬನ್ನಿ ಸಾರ್'.

ಮಾಯಣ್ಣನನ್ನು ಸಿದ್ದಪ್ಪ ಹಿಂಬಾಲಿಸಿದರು.

'ರಿಪೋರ್ಟ್ ಮಾಡ್ಕೊಂಡ್ಮೇಲೆ ಮೂರು ದಿನ ಹಳೆ ರೆಕಾರ್ಡ್ಸ್ ಚೆಕ್ ಮಾಡೋದೇ ಆಯ್ತು ಸಾರ್... ಈ ಜ್ಯೂರಿಸ್ಡಿಕ್ಷನ್‌ನಲ್ಲಿನ ಮಹಾಮಹಿಮರು ಯಾರು, ಅವರ ಹಿನ್ನೆಲೆ ಏನು, ಚರಿತ್ರೆ ಏನು, ಪುರಾಣ ಏನು... ಗೊತ್ತಿರಬೇಕಲ್ಲ ಸಾರ್ ನಮಗೆ...'

ಬಾಗಿಲ ಕಡೆ ತಿರುಗಿ,

'ಬನ್ನಿ ವಿನಯ್...'

ಮಾಯಣ್ಣನ ಮನಸ್ಸನ್ನು ಓದಿದ ಹಾಗೆ ವಿನಯ್ ಒಳಬಂದು ಚಿಲಕ ಎಳೆದಿದ್ದ.

ವಿನಯ್ ಬಿ.ಎಸ್ಸಿ. ಡಿಗ್ರಿ ಎರಡನೇ ವರ್ಷ ಓದುವಾಗ ಅನಿವಾರ್ಯವಾಗಿ ತನ್ನ ಬಡ ಕುಟುಂಬದ ಹೊಣೆ ಅವನ ಹೆಗಲ ಮೇಲೆ ಬಿದ್ದು, ಓದು ಅರ್ಧಕ್ಕೆ ನಿಂತು, ಪೇದೆಯಾಗಿ ಇಲಾಖೆ ಸೇರಿದ್ದ, ತೀಕ್ಷ್ಣಮತಿ.

'ನೋಡಿ ಸಾರ್ ಇದು... 2005ರಿಂದ ಶುರು ಆಗುತ್ತೆ'.

ಸಿದ್ದಪ್ಪನ ಕೈಗೆ ಮಾಯಣ್ಣ ಒಂದು ದೂಳಿಡಿದ ಕಡತ ಚಾಚಿ ಹಿಡಿದ. ಕಡತವನ್ನು ಕೈಗೆತ್ತಿಕೊಂಡ ಸಿದ್ದಪ್ಪ ಅದರ ಹೊದಿಕೆ ತಿರುವಿ ನೋಡಿದರೆ ಅಲ್ಲಿ ಕಂಡಿದ್ದೇನು? ಸ್ಲೇಟು ಹಿಡಿದು ನಿಂತ ತನ್ನದೇ ಫೋಟೊ. ಎಷ್ಟೇ ಆದರೂ ಹಳೆ ನರಿ. ಸ್ವಲ್ಪವೂ ಧೈರ್ಯಗೆಡದಂತೆ, ಪೂರ್ತಿ ಆತ್ಮವಿಶ್ವಾಸದಿಂದ,

'ಏನಿದು?'

'ಆಯ್ತು, ನಾನೇ ಹೇಳ್ತೀನಿ ಕೇಳು...'

ಬಹುವಚನದಿಂದ ಏಕವಚನಕ್ಕೆ ಬಂದಿತ್ತು ಮಾಯಣ್ಣನ ಭಾಷೆ.

'ನಮ್ಮ ಸ್ಟೇಷನ್ನಲ್ಲಿ ನಿನ್ನ ಕ್ರೈಮ್ ಗ್ರಾಫ್ ಶುರು ಆಗೋದು 2005ರಲ್ಲಿ. ಅದಕ್ಕೆ ಮುಂಚೆ, ಪಿಕ್ ಪಾಕೆಟ್, ಸಣ್ಣ ಪುಟ್ಟ ದೊಂಬಿ ಗಲಾಟೆ, ಕಳ್ಳತನ, ಇತ್ಯಾದಿ ಬಾಲಲೀಲೆಗಳು ಇತ್ತು ಅನ್ನೋದು ತಿಳಿದಿದೆ. ನಿನ್ನ ಫಸ್ಟ್ ಅಸೈನ್‌ಮೆಂಟ್ ಸುಧಾ ಲಾಡ್ಜ್ ದಂಧೆಗಳ ಮೇಲುಸ್ತುವಾರಿ... ಆಮೇಲೆ ಏರಿಯಾನಲ್ಲಿ ನಿನಗೆ ಒಬ್ಬ ಪ್ರತಿಸ್ಪರ್ಧಿ ಹುಟ್ಕೊಂಡ... ಅವನು ನಿನಗಿಂತ ಸ್ಪೀಡು... ಎಲ್ಲಿ ಓವರ್ ಟೇಕ್ ಮಾಡಿ ಬಿಡ್ತಾನೊ ಅಂತ ಅವನ್ಮೇಲೆ ಅಟ್ಯಾಕ್ ಮಾಡಿ ಎರಡೂ ಕಾಲು ಲ್ಯಾಪ್ಸ್ ಮಾಡ್ಬಿಟ್ಟೆ. ಪಾಪ, ಅವನು ಫೀಲ್ಡಿಂದ ಇಪ್ಪತ್ತನೇ ವಯಸ್ಸಿಗೇ ಡಿಸ್ಮಿಸ್... ನಿನ್ಮೇಲಿನ **ITPA** ಕೇಸು, ಹಾಫ್ ಮರ್ಡರ್ ಕೇಸು, ಎಲ್ಲಾ ಈ ಫೈಲಲ್ಲಿ ಇದೆ...'

'ಯಾವ್ದೋ ಕ್ಲೋಸ್ ಆಗಿರೊ ಫಾಲ್ಸ್ ಕೇಸ್ ಫೈಲುಗಳು ತೆಗೀತಾಯಿದ್ದೀಯ... ನನ್ನತ್ರ ಪಂಗ ತೆಗುದ್ರೆ ಭೂಮಿ ಮೇಲೇ ನರ್ಕ ತೋರುಸ್ಬಿಡ್ತೀನಿ... ನನ್ನಿಷ್ಟ ಪೂರ್ತಿ ಗೊತ್ತಿಲ್ಲ ನಿಂಗೆ'.

'ಜಾಸ್ತೀನೆ ಗೊತ್ತಿದೆ... ಚೆನ್ನಾಗಿ ಹೋಮ್ ವರ್ಕ್ ಮಾಡಿದ್ದೀನಿ. ಆ ಕಚ್ಚೆಹರಕ ಎಂಪಿನ ಹನಿಟ್ರ್ಯಾಪ್ ಮಾಡಿ, ವಿಡಿಯೊ ಮಾಡಿ, ಆ ಕಾಲದಿಂದಲೂ ಬ್ಲಾಕ್‌ಮೇಲ್ ಮಾಡ್ತಿರೋದೂ ಗೊತ್ತಿದೆ. ನಿನ್ನ ಪಟ್ಟ ಶಿಷ್ಯ, ಇಲ್ಲೇ ಇಟ್ಕೊಂಡು ವರ್ಕ್ ಮಾಡ್ತಾ ಇದ್ದೀವಲ್ಲ, ಅವನ ಮೊಬೈಲ್ನಲ್ಲೇ ಸಿಕ್ತು ವಿಡಿಯೊ ಕ್ಲಿಪ್ಪು. ತೋರುಸ್ಲಾ?'

ಗಂಭೀರ ರಾಜಕೀಯ ತಲ್ಲಣಗಳನ್ನುಂಟು ಮಾಡಬಹುದಾದ ಬ್ರಹ್ಮಾಸ್ತ್ರ ಮಾಯಣ್ಣನ ಕೈ ಸೇರಿದೆಯೆನ್ನುವುದನ್ನರಿತು ಸ್ವಲ್ಪ ವಿಚಲಿತನಾಗಿದ್ದ ಸಿದ್ದಪ್ಪ. ಆದರೂ ಅದನ್ನು ತೋರ್ಪಡಿಸದೆ,

'ಲಿಮಿಟ್ ಕ್ರಾಸ್ ಮಾಡ್ತಾ ಇದ್ದೀಯ... ತಗುಲ್ಕೊಂಬೇಡ ನಂಗೆ... ನಾನು ಮೂರೂ ಬಿಟ್ಟೋನು'.

'ನಾನು ಅಷ್ಟೇ. ಮೂರೂ ಬಿಟ್ಟೋನು. ಪ್ರಾಣದ ಭಯ, ಕೆಲಸ ಹೋಗುತ್ತೆ ಅನ್ನೋ ಭಯ, ಕುಟುಂಬದ ಭಯ. ಗೊತ್ತಿರ್ಲಿ ನೀನು ಕೋರ್ಟ್ ಬೇಲ್ ಜಂಪ್ ಆಗಿ ಓಡಾಡ್ಕೊಂಡಿದ್ದೀಯ'.

ಈಗ ಸಿದ್ದಪ್ಪನಿಗೆ ಚೆನ್ನಾಗಿ ಮನವರಿಕೆ ಆಗಿತ್ತು, ಇನ್ನೆಲ್ಲರಂಥಲ್ಲಾ ಈ ಮಾಯಣ್ಣ ಅಂತಾ. ಅಲ್ಲದೆ ಈ ಹಳೆ ಕೇಸುಗಳು ಹೊರಗೆ ಬಂದು ಮತ್ತೆ ಜೀವಂತವಾದರೆ, ಕೋರ್ಟು, ಜೈಲು ಇನ್ನೆಲ್ಲಾ ರಗಳೆಗಳು ತನ್ನನ್ನು ಸುತ್ತುಗಟ್ಟಿ ಭೂತಕುಣಿತ ಶುರುವಾಗೋದರ ಜೊತೆಗೆ ತನ್ನ ರಾಜಕೀಯ ಭವಿಷ್ಯವೂ ಮಂಕಾಗುತ್ತೆ ಅಂತ ಮೆಲ್ಲಗೆ ವರಸೆ ಬದಲಾಯಿಸಿದ್ದ ಸಿದ್ದಪ್ಪ.

'ನೀವು ಈ ಕ್ಷೇತ್ರದ ಜನ ಪ್ರತಿನಿಧಿಯಾದ ನನ್ನ ಅತ್ರ ಮಾತಾಡ್ತಾಗ, ನನ್ನನ್ನ ಆರಿಸಿ ಆಶೀರ್ವದಿಸಿರೊ ಈ ಕ್ಷೇತ್ರದ ಸಮಸ್ತ ಜನರ ಅತ್ರ ಮಾತಾಡ್ದಂಗೆ ಅನ್ನೋ ಗೌರವ ಇರಲಿ'.

ಏಕವಚನದಿಂದ ಬಹುವಚನಕ್ಕೆ ಬಂದಿತ್ತು ಸಿದ್ದಪ್ಪನ ಭಾಷೆ.

'ಒಬ್ಬ ರೌಡಿ, ತಲೆಹಿಡುಕ, ಭ್ರಷ್ಟ ವ್ಯಕ್ತಿನ, ತಮ್ಮ ಪ್ರತಿನಿಧಿ ಅಂತ ಮೂರು ಸಾರಿ ಸತತವಾಗಿ ಆರಿಸಿದ ಈ ಜನರಿಗೆ ಎಂಥಾ ಗೌರವ ಹೇಳು?'

'ಸರಿ ಮಾಯಣ್ಣ, ದುಡುಕ್ಬೇಡಿ ಅಷ್ಟೇ'

ಆ ಮಾತಲ್ಲಿ ಕ್ಷೀಣವಾದ ಬೆದರಿಕೆಯ ಧ್ವನಿಯೂ ಇತ್ತು. ಇಡೀ ಪ್ರಸಂಗ ಹಾದಿತಪ್ಪಿ ಹಳ್ಳಹಿಡಿದಿತ್ತು. ಇಲ್ಲಿಂದ ಹೊರ ನಡೆಯುವುದೇ ಸರಿ ಎನಿಸಿ ನಿಧಾನವಾಗಿ ಹಿಂದಕ್ಕೆ ತಿರುಗಿದ ಸಿದ್ದಪ್ಪ.

'ಬಾ ಇಲ್ಲಿ. ಇಲ್ಲೀತನಕ ಬಂದಿದ್ದೀಯ. ಅವ್ನು